# ತೋಟಗಾರಿಕೆ ಬೆಳೆಗಳ ವಿಚಾರ ಸಂಕಿರಣ ಉದ್ಘಾಟನೆ

**ವಿಕ ಸುದ್ದಿಲೋಕ** ಕಾಸರಗೋಡು

ಕಾಸರಗೋಡು ಕೇಂದ್ರ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆ (ಸಿಪಿಸಿಆರ್ಐ)ಯಲ್ಲಿ 22ನೇ ತೋಟಗಾರಿಕಾ ಬೆಳೆಗಳ ವಿಚಾರ ಸಂಕಿರಣವನ್ನು ಹೊಸದಿಲ್ಲಿಯ ಐಸಿಎಆರ್ ಸಹಾಯಕ ನಿರ್ದೇಶಕ ಜನರಲ್ ಡಾ. ಡಬ್ಲ್ಯು. ಎಸ್. ದಿಲ್ಲೊನ್ ಗುರುವಾರ ಉದ್ಘಾಟಿಸಿದರು.

ಕೃಷಿಕರ ಆದಾಯವನ್ನು ದ್ವಿಗುಣಗೊಳಿಸುವ ಪ್ರಧಾನಿ ಮೋದಿ ಅವರ ಕನಸು ನನಸಾಗಬೇಕಾದರೆ ಪೋಸ್ಟ್ ಹಾರ್ವೆಸ್ಟ್ ಸಂಶೋಧನೆಯ ಅಗತ್ಯ ವಿದೆ ಎಂದು ಅವರು ಹೇಳಿದರು.

ತೋಟಗಾರಿಕೆ ಬೆಳೆಗಳ ಕೊಡುಗೆಯನ್ನು ವಿವರಿಸುತ್ತಾ, ತೋಟಗಾರಿಕೆ ಬೆಳೆಗಳ ಆಧಾರಿತ ವ್ಯವಸ್ಥೆಯನ್ನುಸಮರ್ಪಕವಾಗಿ ನಿರ್ವಹಿಸಲಾಗುತ್ತದೆ ಎಂದು ಹೇಳಿದರು.




ಇಂಡಿಯನ್ ಸೊಸೈಟಿ ಆಫ್ ಪ್ಲಾಂಟೇಶನ್ ಕ್ರಾಪ್ಸ್ (ಐಎಸ್‌ಪಿಸಿ) ಹಾಗು ಕೇಂದ್ರ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆ ಆಯೋಜಿಸಿದ

ಐಸಿಎಆರ್‌ನ ಮಾಜಿ ಸಹಾಯಕ ನಿರ್ದೇಶಕ ಹಾಗೂ ರಾಷ್ಟ್ರೀಯ ತಾಳೆ ಎಣ್ಣೆ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಪಿ. ರತಿನಾಮ್ ಮಾತನಾಡಿ, ಕೇಂದ್ರ ತೋಟಗಾರಿಕೆ ಬೆಳೆಗಳ ಆರೋಗ್ಯ ಪ್ರಯೋಜನಗಳನ್ನು ಜನಪ್ರಿಯಗೊಳಿಸುವ ಹಾಗೂ ಸ್ಥಾಪಿತ ಮಾರುಕಟ್ಟೆಯನ್ನು ರಚಿಸುವ ಅಗತ್ಯದ ಕುರಿತು ಹೇಳಿದರು.

ಕೇರಳ ಕೃಷಿ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ, ಐಐಎಸ್‌ಆರ್ ಕ್ಯಾಲಿಕಟ್‌ನ ನಿರ್ದೇಶಕ ಡಾ. ಕೆ.ವಿ. ಪೀಟರ್ ಮಾತನಾಡಿ, ಭಾರತೀಯ ರೈತರ ಹಿತರಕ್ಷಣೆ ಕಾಪಾಡಲು ಸಭೆಗಳಲ್ಲಿ ತೋಟಗಾರಿಕೆ ಬೆಳೆಗಳ ತಜ್ಞರ ಪ್ರಾತಿನಿಧ್ಯ ಇರಬೇಕು ಎಂದು ಆಗ್ರಹಿಸಿದರು. ವಹಿವಾಟು ಬಗ್ಗೆ ಎಚ್ಚರಿಕೆ, ಬಜೆಟ್ ಸೂತ್ರೀಕರಣದ ಕುರಿತು ಅವರು ಮಾತನಾಡಿದರು.

ಸಿಪಿಸಿಆರ್ಐ ನಿರ್ದೇಶಕ ಡಾ. ಚೌಡಪ್ಪ, ತೋಟಗಾರಿಕಾ ಬೆಳೆಗಳ ಮೌಲ್ಯದ ಕುರಿತು ಮಾತನಾಡಿದರು. ಸಮಾರಂಭದಲ್ಲಿ ಕೋಟ್ಟಯಂನ ಭಾರತೀಯ ರಬ್ಬರ್ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಜೇಮ್ಸ್ ಜಾಕೋಬ್ ಅವರಿಗೆ ಡಾ. ಸಿ.ಎಸ್. ವೆಂಕ್ರಮಣ ಸ್ಮಾರಕ ಟ್ರಸ್ಟ್‌ನ ಸೈಂಟಿಸ್ಟ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಿಪಿಸಿಆರ್ಐ ನಿರ್ದೇಶಕ ಡಾ.ಪಿ. ಚೌಡಪ್ಪ ಹಾಗೂ ಡಾ. ರವಿ ಭಟ್ ಪ್ರಶಸ್ತಿಗೆ ಭಾಜನರಾದರು. ವಿಜ್ಞಾನಿಗಳ ತಂಡವಾದ ಸಿಪಿಸಿಆರ್ಐಯ ಮಾಜಿ ನಿರ್ದೇಶಕ ಡಾ. ಜಿ. ವಿ. ಥೋಮಸ್, ಡಾ. ಬಿ.ಎ. ಜೆರಾರ್ಡ್, ಡಾ. ವಿ. ನಿರಾಲ್, ಡಾ. ಕೆ. ಶಂಸುದ್ದೀನ್ ಅವರ ಬೆಯಿನ್ನಿಯಂ 2015-16 ಗೆ ಬೆಸ್ಟ್ ಒರಿಜಿನಲ್ ರಿಸರ್ಚ್ ಪ್ರಶಸ್ತಿ ಲಭಿಸಿತು. ಐಎಸ್‌ಪಿಸಿ ಪ್ರಧಾನ ಕಾರ್ಯದರ್ಶಿ ಡಾ. ಎಂ. ಕೆ. ರಾಜೇಶ್ ವಂದಿಸಿದರು.